1 ನೇ ಅಪರ ಜಿಲ್ಲಾ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು

ಎಸ್ ಸಿ 121/2019

| | | | | |
|---|---|---|---|---|
| ಸಾಕ್ಷಿದಾರರ ಹೆಸರು | ಃ | ಜಗದೀಶ | ಪ್ರಾಸಾ | 1 |
| ತಂದೆ ಹೆಸರು | ಃ | ಮಹದೇವಪ್ಪ | ಚಾಸಾ | 1 |
| ವಯಸ್ಸು | ಃ | 26 ವರ್ಷ | ಸಾಕ್ಷಿಯು ಪ್ರಮಾಣ ಮಾಡಿದ ದಿ ಃ 26.12.2022 | |
| ವೃತ್ತಿ | ಃ | ಜೆ ಎಸ್ ಎಸ್ ಮೆಡಿಕಲ್ ಕಾಲೇಜಿನ ಬಸ್ ಕ್ಲೀನರ್ | | |
| ವಾಸ ಸ್ಥಳ | ಃ | ಮೈಸೂರು | | |

**ಮುಖ್ಯ ವಿಚಾರಣೆ ಃ ವಿಶೇಷ ಸರಕಾರಿ ಅಭಿಯೋಜಕರವರಿಂದ ಃ**

1. ಚಾಸಾ 2 ರಿಂದ 16 ನನಗೆ ಗೊತ್ತು. ಈಗ ನ್ಯಾಯಾಲಯದಲ್ಲಿರುವ ಆರೋಪಿತರು ಗೊತ್ತು. ಈಗ ಸುಮಾರು 4 ವರ್ಷಗಳ ಹಿಂದೆ ನಾನು ಗಣಪತಿ ದೇವಸ್ಥಾನದಿಂದ ಕಾವೇರಿ ನಗರದ ಒಳಗಡೆ ಬರುತ್ತಿದ್ದೆನು. ಆಗ ರಾತ್ರಿ 8.50 ಗಂಟೆ ಆಗಿತ್ತು. ಸದರಿ ಕಾವೇರಿ ನಗರದ ಆಟೋ ಸ್ಟಾಂಡ್ ಬಳಿ ಇರುವ ನಾರಾಯಣ ರವರ ಮಳಿಗೆ ಬಳಿ ಆರೋಪಿತರು ನಾರಾಯಣ ರವರಿಗೆ ಬಯ್ಯುತ್ತಿದ್ದರು. ಸದರಿ ಆಟೋ ಸ್ಟಾಂಡ್ ಬಳಿ ಬಸ್ ಸ್ಟಾಂಡ್ ಇರುತ್ತದೆ. ಆರೋಪಿತರು ನಾರಾಯಣಸ್ವಾಮಿ ಅವರಿಗೆ ಬಯ್ಯುತ್ತಿದ್ದಾಗ ಅವರು ಬಯ್ಯಬೇಡ ಹೋಗಿ ಅಂತ ಹೇಳುತ್ತಿದ್ದರು. ಆದರೆ ಆರೋಪಿತರು ಗುಂಪು ಕಟ್ಟಿಕೊಂಡು ಅವರಲ್ಲಿ ಹರೀಶ ಲಾಂಗ್ ನಿಂದ ನಾರಾಯಣಸ್ವಾಮಿ ಅವರ ಕುತ್ತಿಗೆಗೆ ಹೊಡೆದನು. ನಂತರ ಅದೇ ಲಾಂಗ್ ನಿಂದ ನಾರಾಯಣಸ್ವಾಮಿಯ ಎಡಗೈಗೆ ಹೊಡೆದು ರಕ್ತ ಗಾಯಗೊಳಿಸಿದನು. ನಂತರ ಮಂಜ ಅಲಿಯಾಸ್ ಗುಂಡ ರವರು ಚಾಕುವಿನಿಂದ ನಾರಾಯಣಸ್ವಾಮಿ ಅವರ ಬಲಗಡೆ ಹಿಂಭಾಗದ ಸ್ವಂಟಕ್ಕೆ ತಿವಿದನು. ಕಾರಣ ಅಲ್ಲಿ ರಕ್ತಗಾಯವಾಗಿತ್ತು. ಉಳಿದ ಆರೋಪಿತರು ಕೈಯಿಂದ ನಾರಾಯಣಸ್ವಾಮಿ ಅವರಿಗೆ ಹೊಡೆದರು. ಎಲ್ಲಾ ಆರೋಪಿತರು ಹಲ್ಲೆ ಮಾಡಿದ ಕಾರಣ ನಾರಾಯಣಸ್ವಾಮಿ ಅವರು ಕೆಳಗೆ ಬಿದ್ದರು.

2. ಆ ಸಮಯದಲ್ಲಿ ಅಲ್ಲಿ ಚಾಸಾ 11 ನಾಗಲಾಂಬಿಕ ಮತ್ತು ಚಾಸಾ 12 ಸುಜಾತ ಬಂದರು. ಅವರು ಮತ್ತು ನಾನು ನಾರಾಯಣಸ್ವಾಮಿ ಅವರನ್ನು ಎತ್ತಿಕೊಂಡೆವು. ಆಗ ನನ್ನ ಬಟ್ಟೆಗೂ ರಕ್ತ ತಾಗಿತ್ತು. ನಾರಾಯಣಸ್ವಾಮಿ ಅವರನ್ನು ಚಾಸಾ 16 ಚಂದ್ರು ರವರ ವ್ಯಾನ್ ಗೆ ಹಾಕಿಕೊಂಡು ಆಸ್ಪತ್ರೆಗೆ ಹೋದರು. ಘಟನೆ ಆದಾಗ ರಾತ್ರಿ 8.50 ಗಂಟೆ ಆಗಿತ್ತು. ಅಲ್ಲಿ ದೊಡ್ಡ ಲೈಟ್ ಕಂಬ ಇತ್ತು.

3. ನಂತರ ನಾನು ಪೊಲೀಸ್ ಠಾಣೆಗೆ ಹೋಗಿ ದೂರು ನೀಡಿದೆನು. ಈಗ ತೋರಿಸಿದ ದೂರಿನಲ್ಲಿ ನನ್ನ ಸಹಿ ಇದೆ. ಸದರಿ ದೂರನ್ನು ನಾನೇ ಹೇಳಿ ಬರೆಸಿದ್ದೆನೆ. ಅದರಲ್ಲಿ ಬರೆದಿರುವುದು ಸರಿ ಇರುತ್ತದೆ. ಸದರಿ ದೂರನ್ನು ನಿಪಿ 1 ಎಂದು ಸಾಕ್ಷಿದಾರರ ಸಹಿಯನ್ನು ನಿಪಿ 1 ಎ ಎಂದು ಗುರುತಿಸಲಾಯಿತು. ನಾನ ಕೊಟ್ಟ ದೂರಿನನ್ವಯ ಪೊಲೀಸರು ಎಫ್ ಐ ಆರ್ ಮಾಡಿದ್ದು ಅದಕ್ಕೆ ನನ್ನ ಸಹಿ ಪಡೆದಿದ್ದರು. ಸದರಿ ಎಫ್ ಐ ಆರ್ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ಪ್ರ.ವ.ವರದಿಯನ್ನು ನಿಪಿ 2 ಎಂದು ಸಾಕ್ಷಿದಾರರ ಸಹಿಯನ್ನು ನಿಪಿ 2 ಎ ಎಂದು ಗುರುತಿಸಲಾಯಿತು.

4. ದೂರು ಕೊಟ್ಟಾಗ ಸಮಯ ರಾತ್ರಿ 10 ಗಂಟೆ ಆಗಿತ್ತು. ನಂತರ ಪೊಲೀಸರು ಗಲಾಟೆ ನಡೆದ ಸ್ಥಳಕ್ಕೆ ಬಂದರು. ಗಲಾಟೆಯಾದ ಸ್ಥಳವನ್ನು ನಾನು ಪೊಲೀಸರಿಗೆ ತೋರಿಸಿದನು. ಪೊಲೀಸರು ಬಂದಾಗ ಅಕ್ಕಪಕ್ಕದ ಜನರು ಇದ್ದರು. ವೀರಭದ್ರಪ್ಪ , ಕುಮಾರ ಮತ್ತು ದೊಡ್ಡಸಿದ್ದೇಗೌಡ ಎಂಬುವವರು ಇದ್ದರು. ಗಲಾಟೆಯಾದ ಜಾಗದಲ್ಲಿ ರಕ್ತ ಬಿದ್ದಿತ್ತು. ನಾರಾಯಣಸ್ವಾಮಿ ಅವರ ವಾಚ್ , ಸ್ಲಿಪರ್ ಬಿದ್ದಿತ್ತು. ಪೊಲೀಸರು ಅಲ್ಲಿ ಮಹಜರ್ ಮಾಡಿ ಅಲ್ಲಿ ಬಿದ್ದಿದ್ದ ನಾರಾಯಣಸ್ವಾಮಿ ಅವರ ವಾಚ್ , ಸ್ಲಿಪರ್ , ಸಾದಾ ಮಣ್ಣು ಮತ್ತು ರಕ್ತ ತಾಗಿದ್ದ ಮಣ್ಣನ್ನು ತೆಗೆದುಕೊಂಡರು. ಅದೇ ರೀತಿ ನನ್ನ ಶರ್ಟಿಗೆ ನಾರಾಯಣಸ್ವಾಮಿ ಅವರ ರಕ್ತ ತಾಗಿದ್ದು ಅದನ್ನು ತೆಗೆದು ಪೊಲೀಸರಿಗೆ ಕೊಟ್ಟೆನು.

ಪೊಲೀಸರು ಅದನ್ನು ವಶಪಡಿಸಿಕೊಂಡರು. ಪೊಲೀಸರು ಮೇಲಿನ ವಸ್ತುಗಳನ್ನು ಪ್ರತ್ಯೇಕವಾಗಿ ಬಟ್ಟೆಯಲ್ಲಿ ಹಾಕಿ ಸೀಲ್ ಮಾಡಿ ನನ್ನ ಹೆಸರು ಬರೆದು ಚೀಟಿಗಳನ್ನು ಅಂಟಿಸಿದರು.

5. ಮಹಜರ್ ಕಾಲದಲ್ಲಿ ಸ್ಥಳದಲ್ಲಿ 1 ನೇ ಆರೋಪಿಗೆ ಸೇರಿದ ಆಟೋ ಇತ್ತು.ಸದರಿ ಆಟೋ ಗ್ಲಾಸ್ ಒಡೆದಿತ್ತು , ರಕ್ತದ ಕಲೆ ಆಗಿತ್ತು. ಪೊಲೀಸರು ಸದರಿ ಆಟೋವನ್ನು ಸಹ ಮಹಜರ್ ಕಾಲದಲ್ಲಿ ಅಮಾನತ್ತು ಪಡಿಸಿಕೊಂಡರು. ಮಹಜರ್ ಕಾಲದಲ್ಲಿ ಅಲ್ಲಿ ಒಂದು ಟೀ ಸ್ಪೂನ್ ಬಿದ್ದಿದ್ದು ಅದನ್ನು ಕೂಡ ತೆಗೆದುಕೊಂಡಿದ್ದರು. ಮಹಜರ್ ಬರೆದ ನಂತರ ನಾನು ಅದಕ್ಕೆ ಸಹಿ ಮಾಡಿದ್ದೆನು. ಸದರಿ ಮಹಜರ್ ಈಗ ನೋಡುತ್ತಿದ್ದು ಅದರಲ್ಲಿ ನನ್ನ ಸಹಿ ಇದೆ. ಮಹಜರ್ ನ್ನು ನಿಪಿ 2 ಎಂದು ಸಾಕ್ಷಿದಾರ ಸಹಿಯನ್ನು ನಿಪಿ 2 ಎ ಎಂದು ಗುರುತಿಸಲಾಯಿತು. ಮಹಜರ್ ನ್ನು ರಾತ್ರಿ 11 ಗಂಟೆಯಿಂದ 12 ಗಂಟೆವರೆಗೆ ಬರೆದರು. ಮಹಜರ್ ಬರೆದಾಗ ಅಲ್ಲಿ ಲೈಟ್ ಕಂಬ ಇದ್ದು ಆ ಬೆಳಕಿನಲ್ಲಿ ಬರೆದಿದ್ದರು.

6. ಘಟನೆಯಲ್ಲಿ ನಾರಾಯಣಸ್ವಾಮಿ ಅವರ ಮೇಲೆ ಮಾಡಿದ ಲಾಂಟ್ ಮತ್ತು ಚಾಕುವನ್ನು ತೆಗೆದುಕೊಂಡು ಹೋಗಿದ್ದರು. ಅವರು ಬಂದಿದ್ದ ಕಾರನ್ನು ಸಹ ತೆಗೆದುಕೊಂಡು ಹೋಗಿದ್ದರು.

(ಈ ಹಂತದಲ್ಲಿ ಸ್ಪೆ.ಪಿಪಿ ರವರ ವಿನಂತಿ ಮೇರೆಗೆ ಮುಂದುವರಿದ ಮುಖ್ಯ ವಿಚಾರಣೆಗಾಗಿ ಮುಂದೂಡಲಾಯಿತು)

(ನನ್ನ ಉ ಮೇ ತೆ ನ್ಯಾ ಬೆ ಮಾಡಲಾಯಿತು)

ಓ ಹೇ ಕೇ ಸ ಇ ಎ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ,
ಮೈಸೂರು